ನನಗೆ ಒಮ್ಮೆಲೇ ಮೈ ಉರಿಯಿತು. ''ಏನಯ್ಯ ತಮಾಷೆ ಮಾಡ್ತಿದೀಯ?'' ಜೋರು ದನಿಯಲ್ಲಿ ಕೇಳಿದೆ. ಅವನು ಅಷ್ಟೇ ತಣ್ಣಗೆ, ''ಇಲ್ಲ ಸಾರ್, ಸೀರಿಯೆಸ್ಸಾಗೇ ಹೇಳ್ತಿದೀನಿ, ಈ ಹಾವಿಗೆ ಮೊಟ್ಟೆ ಹಾಲು ಏನೂ ಬೇಕಾಗಿಲ್ಲ. ಬರೀ ಮಣ್ಣು ತಿಂದ್ಕೊಂಡೇ ಬೆಳೆಯುತ್ತಂತೆ... ನೀವು ತಿಂಗಳಿಗೊಂದು ಸಲ ಮಣ್ಣನ್ನ ಬದಲಾಯಿಸಿ, ದಿನಕ್ಕೆ ಒಂದೆರಡು ಗಂಟೆ ಪೆಟ್ಟಿಗೆಯಿಂದ ಹೊರಗೆ ಬಿಡಿ, ಹಾಗೇ ಓಡಾಡ್ಕೊಂಡಿರುತ್ತೆ... ನಾವಾಗಿ ಮುಟ್ಟಿದ್ರೆ ಅದರ ತೂಕ ಕಮ್ಮಿಯಾಗುತ್ತೆ ಸಾರ್, ಅದಾಗೇ ನಮ್ಮ ಮೈಮೇಲೆ ಓಡಾಡಿದ್ರೆ ಪ್ರಾಬ್ಲಂ ಏನಿಲ್ಲ...'' ನನ್ನ ಸಿಟ್ಟು ಮೇರೆ ಮೀರಿತ್ತು. ಇಷ್ಟು ಕಾಲ ಎಲ್ಲ ಕೆಲಸಗಳನ್ನು ಬದಿಗಿಟ್ಟು ಈ ಆಟ ಆಡಿಸುವ ಹಾವಿನ ಹಿಂದೆ ಹೋಗಿದ್ದು ನನಗೆ ತಲೆಚಿಟ್ಟು ಹಿಡಿಸಿತ್ತು. ಅದು ಸಿಕ್ಕಮೇಲೂ ಆಸಾಮಿ ಹೀಗೆನ್ನುತ್ತಿದ್ದಾನೆ. ಅದೇ ಸಿಟ್ಟಿನಲ್ಲಿ, ''ನಿಂಗೇನಾದ್ರೂ ತಲೆ ಕೆಟ್ಟಿದ್ಯಾ? ಹಾವನ್ನ ಬೆಡ್‌ರೂಮಲ್ಲಿ ಸಾಕ್ಕೋಳೋದೂ ಅಲ್ದೆ ಮೈಮೇಲೆ ಬಿಟ್ಕೊಬೇಕಾ?'' ಎಂದೆ. ನನ್ನ ಸಿಟ್ಟು ತನಗೆ ತಾಕೇ ಇಲ್ಲ ಎನ್ನುವಂತೆ ಅವನು ತಣ್ಣಗೆ, ''ಸಾರ್, ಅದು ಹಸುಗೂಸಿನ ಥರ ನಿರುಪದ್ರವಿ ಜೀವಿ ಸಾರ್, ಒಂದು ನಾಲ್ಕು ದಿನ ರೂಢಿ ಆದ್ರೆ ನೀವೇ ಅದನ್ನ ಬಿಟ್ಟಿರೋದಿಲ್ಲ ಅಂತೀರಿ. ಸ್ವಲ್ಪ ದಿನ ಬಳಕೆ ಆಗಬೇಕು ಅಷ್ಟೇ. ಹೊರಗಡೆ ಯಾರ್ಗೂ ನೀವು ಡಬಲ್ ಎಂಜಿನ್ ಸಾಕ್ತಿದೀನಿ ಅನ್ನೋದು ಗೊತ್ತಾಗಬಾರ್ದು. ಒಂದಾರು ತಿಂಗಳು ಅಷ್ಟೇ'' ಎಂದು ಪುಸಲಾಯಿಸುತ್ತಿದ್ದ. ಬದುಕಿನ ಬವಣೆಗೆ ಬೇಸತ್ತು, ಏನೋ ನನಗೂ ಅದೃಷ್ಟ ಬಂತೇನೋ ಎಂಬ ನಂಬಿಕೆಯಿಂದಲೇ ಈ ಕೆಲಸಕ್ಕೆ ಕೈ ಹಾಕಿದ್ದೆ. ಆದರೀಗ ಅದೃಷ್ಟ ಅದರಿಷ್ಟ ಎಂಬಂತಾಗಿತ್ತು. ಏನಾದ್ರೂ ಮಾಡಿ ಈಗ ಸಿಕ್ಕಿರೋ ಹಾವನ್ನ ಶೇಷುಗೆ ದಾಟಿಸಿ ಅದೆಷ್ಟು ಸಿಗುತ್ತೋ ಅಷ್ಟರಲ್ಲೇ ಸದ್ಯದ ಭವ ಬಂಧನಗಳಿಗೆ ಒಂದಷ್ಟಾದರೂ ಶಾಂತಿ ಮಾಡೋಣ ಎನಿಸಿ ಅವನಲ್ಲಿ ಅದನ್ನೇ ಅರುಹಿದೆ. ''ಸರಿ ಒಂದ್ಹತ್ತು ನಿಮಿಷ ಇರಿ, ನಾನೇ ಫೋನ್ ಮಾಡ್ತೀನಿ'' ಎಂದವನು ಅರ್ಧಗಂಟೆ ನಂತರ ಫೋನ್ ಮಾಡಿ, ''ಸಾರ್, ಮಿನಿಮಮ್ ಮೂರು ಕೇಜಿ ಮೇಲಿದ್ರೆ ಮಾತ್ರ ವ್ಯವಹಾರ ಕೋಟಿಗಳ ಲೆಕ್ಕದಲ್ಲಿರುತ್ತಂತೆ, ಅದಕ್ಕಿಂತ ಕಡಿಮೆ ಇದ್ರೆ ಬರೀ ಲಕ್ಷಗಳಲ್ಲಿ ವ್ಯವಹಾರ ಮುಗಿದುಹೋಗುತ್ತೆ. ಈಗ್ಲೂ ಕಾಲ ಮಿಂಚಿಲ್ಲ, ಆರೇ ಆರು ತಿಂಗಳು ಆರೈಕೆ ಮಾಡಿ. ಇಲ್ಲ ಅಂದ್ರೆ ನಿಮ್ಮಿಷ್ಟ...'' ಎಂದ. ನನ್ನನ್ನೇ ನಾನು ಸಾಕಿಕೊಳ್ಳುವುದು ಕಷ್ಟವಿತ್ತು. ಹಾಗಿರುವಾಗ ಸಂಸಾರದ ಜೊತೆಗೆ ಹಾವನ್ನು ಸಾಕುವುದು ಹೇಗೆ? ಅದೂ ಗುಟ್ಟಾಗಿ? ಬಂದಷ್ಟು ಬರಲಿ. ಬಂದದ್ದರಲ್ಲಿ ಕೊನೇ ಪಕ್ಷ ಮೂರು ತಿಂಗಳ ರೇಷನ್, ಬೈಕ್‌ಗೆ ಹೊಸ ಟೈರ್ ಹಾಕಿಸಿ, ಮಕ್ಕಳ ಸ್ಕೂಲ್ ಈ ವರ್ಷದ ಸ್ಕೂಲ್ ಫೀಸ್ ಕಟ್ಟಿ ಮಿಕ್ಕಿದರೆ ಒಂದಾರು ತಿಂಗಳು ಚಿಂತೆಯಿರುವುದಿಲ್ಲ. ''ಸರಿನಪ್ಪ, ಅದೇನು ಕೊಡ್ತಾರೋ ಕೊಡಲಿ. ಬರಲಿಕ್ಕೆ ಹೇಳು, ನೀವು ಬಾಗೇಪಲ್ಲಿಗೆ ಬರುವ ಮುಂಚೆಯೇ ನಾನಲ್ಲಿ ಕಾಯ್ತಿರ್ತೀನಿ'' ಎಂದೆ.

ಅವನು ಕರುಣೆ ತೋರಿಸುವ ದನಿಯಲ್ಲಿ, ''ಸಾರ್, ಕೋಟಿಗಳ ವ್ಯವಹಾರ ಆದ್ರೆ ಅವರೇ ಬರ್ತಾರೆ, ಲಕ್ಷಗಳು ಅಂದ್ರೆ ಅವರಿಗೆ ಅಲಕ್ಷ. ನೀವೇ ರಿಸ್ಕು ತಗೊಂಡು ಹುಷಾರಾಗಿ ಹಾವನ್ನ ತಗೊಂಡು ಬರಬೇಕು'' ಎಂದು ಚೆಂಡನ್ನು ನನ್ನ ಅಂಗಳಕ್ಕೇ ದಾಟಿಸಿದ. ಕೋಟಿಗಳ ವ್ಯವಹಾರ ಈಗ ಲಕ್ಷಗಳಿಗೆ ಇಳಿದಿತ್ತು. ಇದು ಗೊತ್ತಾದರೆ ನಮ್ಮ ಭಾವ ಏನು ತಪ್ಪು ತಿಳಿದುಕೊಳ್ಳುತ್ತಾನೋ ಎಂಬ ಸಂಕಟ ಬೇರೆ! ಸದ್ಯಕ್ಕೆ ಇದ್ಯಾವುದನ್ನೂ ಈಗ ಹೇಳುವುದು ಬೇಡ, ಸೀದಾ ಬಾಗೇಪಲ್ಲಿಗೆ ಹೋಗಿ ಹಾವನ್ನು ಸುಪರ್ದಿಗೆ ತಗೊಂಡು ಆನಂತರ ನಿರ್ಧರಿಸೋಣ ಎಂದು ಯೋಚಿಸಿದೆ. ನಮ್ಮ ಭಾವನಿಗೆ ವಿಷಯ ಅರುಹಿದೆ. ಅದಕ್ಕೆ ಅವನು, 'ನನಗೆ ಅರ್ಜೆಂಟ್